ಗೆಳತಿಗೆ ನನ್ನ ಅಸಮಾಧಾನವನ್ನು ವ್ಯಕ್ತಪಡಿಸಿದ್ದೆ. 'ಹುಷ್, ನಿನ್ನ ಸ್ತ್ರೀವಾದ ಇಲ್ಲಿ ತೆಗೆಯಬೇಡ. ಇದು ಸಂಪ್ರದಾಯ, ವಿವಾಹದ ವಿಧಿವಿಧಾನ. ಹೆಣ್ಣು ಹೆತ್ತ ಮೇಲೆ ಮಾಡಲೇಬೇಕಲ್ಲ. ವರ ಇವರ ಕನ್ಯಾಸೆರೆಯನ್ನು ಬಿಡಿಸುತ್ತಿದ್ದಾನೆ' ಎಂದು ನನ್ನ ಅಜ್ಞಾನದ ಕಂದರದಲ್ಲಿ ಸಂಪ್ರದಾಯದ ಟಾರ್ಚ್ ಬಿಡಲು ಗೆಳತಿ ಪ್ರಯತ್ನಿಸಿದ್ದಳು.

ಇಂದು ಹೆಣ್ಣುಮಕ್ಕಳು ಗಂಡಿಗೆ ಸರಿ ಸಮಾನವಾಗಿ ಓದಿ, ಆರ್ಥಿಕವಾಗಿಯೂ ಸ್ವಾವಲಂಬಿಗಳಾಗಿದ್ದಾರೆ. ಆದರೆ ಇವು ಯಾವುವೂ ಆಕೆ 'ದಾನ'ವಾಗುವುದನ್ನು ತಪ್ಪಿಸಿದಂತಿರಲಿಲ್ಲ. ಆಕೆಯ ತಂದೆ 'ಹೆಣ್ಣು ಹೆತ್ತ ತಪ್ಪಿಗೆ' ವರನ ಪಾದಗಳನ್ನು ತೊಳೆಯುವುದನ್ನು ನಿಲ್ಲಿಸುವಂತಿಲ್ಲ. 'ನಮ್ಮ ಮಗಳು ನಮ್ಮ ಮನೆಯಂಗಳದ ಬೆಳಕು. ನಿಮ್ಮ ಮನೆ ಬೆಳಗಲು ಆಕೆ ಒಪ್ಪಿ ಬರುತ್ತಿರುವುದಕ್ಕೆ ವರನ ಕಡೆಯವರು ಕೃತಜ್ಞರಾಗಿರಬೇಕು' – ನನ್ನ ವಾದಗಳೆಲ್ಲ ಇಲ್ಲಿ ನಡೆಯುವಂತಿರಲಿಲ್ಲ.

ನನ್ನ ವಿವಾಹದಲ್ಲಿ ಇವೊಂದೂ ಇರಲಿಲ್ಲ. ಇಸವಿ 1875ರಲ್ಲಿ 'ಆರ್ಯಸಮಾಜ'ವನ್ನು ಸ್ಥಾಪಿಸಿದ ದಯಾನಂದ ಸರಸ್ವತಿ ಅವರು ಆರ್ಯಸಮಾಜದ ವಿವಾಹ ವಿಧಿ ವಿಧಾನಗಳನ್ನು ವೇದಗಳನ್ನು ಆಧರಿಸಿಯೇ ಸ್ವತಃ ರಚಿಸಿದ್ದರು. ವೇದಾನುಕೂಲವಾದ ಅಂಶಗಳನ್ನು ಉಳಿಸಿಕೊಂಡು, ಯಾವುದೇ ಒಂದು ಜಾತಿ ಅಥವಾ ಜನಾಂಗಕ್ಕೆ ಅನ್ವಯಿಸದೆ, ಮಾನವಕುಲಕ್ಕೆ ಅನ್ವಯಿಸುವ ಆಶಯದಿಂದ ರಚಿಸಿದರು. ಅಂತರ್ಜಾತಿ ವಿವಾಹಗಳನ್ನು ಪ್ರೋತ್ಸಾಹಿಸಿದರು. ವಿವಾಹವನ್ನು ಬದುಕಿನುದ್ದಕ್ಕೆ ಸ್ತ್ರೀ–ಪುರುಷರು ನಿರ್ವಹಿಸಲು ಸ್ವೀಕರಿಸುತ್ತಿರುವ 'ಆಧ್ಯಾತ್ಮಿಕ ವ್ರತ' ಎಂದು ಬಗೆದರು.

ಮಹರ್ಷಿ ದಯಾನಂದ ಸರಸ್ವತಿಯವರು 145 ವರ್ಷಗಳ ಹಿಂದೆ ಆರ್ಯಸಮಾಜವನ್ನು ಸ್ಥಾಪಿಸಿದ ಮುಖ್ಯ ಉದ್ದೇಶ ಮಾನವ ಸಮಾನತೆ, ಭ್ರಾತೃತ್ವ, ವೈಚಾರಿಕತೆ ಮತ್ತು ರಾಷ್ಟ್ರಪ್ರೇಮಗಳನ್ನು ಜಾಗೃತಗೊಳಿಸುವುದಾಗಿತ್ತು. ಅವರ ಈ ಉದ್ದೇಶದ ಕಾರ್ಯ ಸಾಧನೆಯ ಹಾದಿ ಸುಗಮವಿರಲಿಲ್ಲ. ಆ ಹಾದಿಯ ಹೋರಾಟದಲ್ಲಿಯೇ ಅವರು ಹುತಾತ್ಮರಾದರು. ಅಸ್ಪೃಶ್ಯತೆ, ಜಾತೀಯತೆ, ಮೇಲು–ಕೀಳು ಭಾವನೆ, ಪೌರಾಣಿಕ ಗೊಡ್ಡು ಸಂಪ್ರದಾಯಗಳ ವಿರುದ್ಧದ ಅವರ ಹೋರಾಟ

**'ಅತ್ತೆಯ ಮನೆಯಾಗೆ ತೊತ್ತಾಗಿ ಇರಬೇಕು' ಎನ್ನುವುದನ್ನೇ ಒಂದಿಷ್ಟು ಆಧುನಿಕ ರೀತಿಯಲ್ಲಿ ಹೇಳಿ ಕಳುಹಿಸುವಾಗ, 'ಮಹಾರಾಣಿಯಾಗಿ ಬಾಳು' ಎಂದು ಪತಿಯ ಗೃಹಕ್ಕೆ ಬಂದ ವಧುವಿಗೆ ಅಧಿಕಾರವನ್ನು ನೀಡುತ್ತದೆ ಋಗ್ವೇದದ ಮಂತ್ರ!**



## ಅಪ್ರತಿಮ ಸನ್ಯಾಸಿ ದಯಾನಂದ ಸರಸ್ವತಿ

ದಯಾನಂದರು ಹುಟ್ಟಿ ಬೆಳೆದು ಪ್ರಚಾರ ಮಾಡಿದ ಚಾರಿತ್ರಿಕ ಸಂದರ್ಭವನ್ನು ನಾವು ಗಮನಿಸಬೇಕು. ಪರಾಡಳಿತದ ಪದತಳದಲ್ಲಿ ತುಳಿದು ನಿಂತ ಭಾರತ. ಆಂಗ್ಲರು ವ್ಯಾಪಾರ ಮಾಡಲು ಬಂದವರು, ಸೈನ್ಯದೊಡನೆ ಬಂದರು. ಕೈಯಲ್ಲಿ ಬೈಬಲ್ ಹಿಡಿದ ಕ್ರೈಸ್ತ ಪಾದ್ರಿಗಳನ್ನು ತಂದರು. ಬಹಳಷ್ಟು ಬಾರಿ ಇವರು ತಮ್ಮ ಮತದ ಕುಂದು ಕೊರತೆಗಳನ್ನು ಮುಚ್ಚಿಟ್ಟು, ಹಿಂದೂಗಳ ಸಂಪ್ರದಾಯಗಳ ಹುಳುಕುಗಳನ್ನು ಮಾತ್ರ ಹೆಕ್ಕಿ ಹೆಕ್ಕಿ ತೋರಿಸಿ ತಮ್ಮ ಸಿದ್ಧಾಂತದ ಸುಂದರ ಭಾಗಗಳನ್ನು ಉದ್ಗರಿಸಿ ಅನಕ್ಷರಸ್ಥರನ್ನು, ಸುಶಿಕ್ಷಿತರನ್ನೂ ಕ್ರೈಸ್ತ ಮತಕ್ಕೆ ಪರಿವರ್ತಿಸುತ್ತಿದ್ದ ಕಾಲ. ಇದಕ್ಕೆ ಸರಕಾರದ ಬೆಂಬಲ ಅವರಿಗಿತ್ತು. ಇದಲ್ಲದೆ ಆಂಗ್ಲರು ನೀಡುವ ಆರ್ಥಿಕ ಹಾಗೂ ಸಾಮಾಜಿಕ ಸೌಲಭ್ಯಗಳ ಆಮಿಷವೂ ಇತ್ತು.

ಇಂತಹ ಹೊರಗಿನ ದಾಳಿ ನಡೆಯುವಾಗಲೂ, ಹಿಂದೂ ಸಮಾಜ, ಉದ್ದ ತಿಲಕವೋ, ಅಡ್ಡ ವಿಭೂತಿಯ ಪಟ್ಟೆಯೋ, ತುಳಸಿ ಮಾಲೆಯೋ, ರುದ್ರಾಕ್ಷ ಮಾಲೆಯೋ, ಶಿವ ದೊಡ್ಡವನೋ, ವಿಷ್ಣು ದೊಡ್ಡವನೋ, ದಲಿತರಿಗೆ ಏನು ದಂಡ ವಿಧಿಸಬೇಕು, ವರ್ಣ ಸಂಕರವಾದರೆ ಹೇಗೆ ಬಹಿಷ್ಕಾರ ಹಾಕಬೇಕು, ಸಮುದ್ರ ದಾಟಿದವರಿಗೆ ಏನು ಪ್ರಾಯಶ್ಚಿತ್ತ – ಇಂತಹ ರಗಳೆಗಳಲ್ಲಿ ಮುಳುಗಿ ಹೋಗಿತ್ತು.

'ವೇದಾಧಿಕಾರ ಅವರಿಗಿಲ್ಲ, ಯಜ್ಞಾಧಿಕಾರ ಇವರಿಗಿಲ್ಲ, ಅನುಷ್ಠಾನಾಧಿಕಾರ ಮತ್ತೊಬ್ಬರಿಗಿಲ್ಲ ಎಂದು ಹೇಳಿ, ನೂರಕ್ಕೆ 90 ಜನರನ್ನು ಅಜ್ಞಾನದ ಅಂಧಕಾರದಲ್ಲಿ ಅದ್ದಿ ಬಿಟ್ಟಿರಿ. ಇದರ ಪರಿಣಾಮ, ಇತರ ಧರ್ಮಗಳಿಗೆ ಪರಿವರ್ತನೆಯಾಗಿ ಕೋಟ್ಯಂತರ ಜನ ಹೋದರು. ಇನ್ನೂ ನಿಮ್ಮ ಭ್ರಾಂತಿ ತೀರಲಿಲ್ಲ. ಕೈಬಿಟ್ಟು ಹೋಗುತ್ತಿರುವ ದೀನ ದಲಿತರನ್ನು ಮೊದಲು ಉಳಿಸಿಕೊಳ್ಳಿರಿ. ಆಮೇಲೆ ನಡೆಯಲಿ ನಿಮ್ಮ ಚರ್ಚೆ' ಎಂದು ದಯಾನಂದರು ಗುಡುಗಿದ್ದರು.

ಸ್ವಧರ್ಮದತ್ತ ಅಭಿಮಾನವನ್ನು ಮೂಡಿಸಿ, ಪರಧರ್ಮಗಳಿಗೆ ಅನಗತ್ಯ ಪರಿವರ್ತನೆಯನ್ನು ತಡೆಯುವುದಕ್ಕೆ ದಯಾನಂದರು ಪ್ರಯತ್ನಿಸಿದರು. ದಯಾನಂದರು ಜನರೆದುರು ಜಾತಿಯಿಲ್ಲದ ಸುಧಾರಿತ ಸಮಾಜದ ಕಲ್ಪನೆಯನ್ನು ಇಟ್ಟರು. ದೇಶವಾಸಿಗಳಲ್ಲಿ ಆತ್ಮಾಭಿಮಾನವನ್ನು ಜಾಗೃತಗೊಳಿಸಲು ಪ್ರಯತ್ನಿಸಿದರು.